ಸತ್ಯವಾದಿ

ಮೈಸೂರು ನ್ಯಾಯವಿಧಾಯಕ ಸಭೆ

ಮೈಸೂರು ನ್ಯಾಯವಿಧಾಯಕ ಸಭೆಯ ೬ನೆ ಅಧಿವೇಶನವು ಕಳೆದ ಸೋಮವಾರ ಮಧ್ಯಾಹ್ನ ೧೨ ಗಂಟೆಗೆ ನ್ಯಾಯವಿಧಾಯಕ ಸಭಾ ಮಂದಿರದಲ್ಲಿ ನ್ಯಾಯವಿಧಾಯಕ ಸಭಾ ಅಧ್ಯಕ್ಷರಾದ ಮಾ|| ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಸಭಾಮಂದಿರದ ಹೊರಭಾಗದಲ್ಲಿ ಸಿವಿಲ್‌ಗಾರ್ಡ್‌ಗಳ ಉಸ್ತುವಾರಿ ಏರ್ಪಡಿಸಿರುವುದು ಒಂದು ಹೊಸ ವಿಷಯವಾಗಿದೆ.

ಪ್ರಥಮತಃ ಪದ್ಧತಿ ಪ್ರಕಾರ ಹೊಸ ಸದಸ್ಯರ ಪ್ರಮಾಣವಚನ ಸ್ವೀಕಾರ ನಡೆಯಿತು. ಅನಂತರ ಸೆಕ್ರಿಟರಿಯವರು ರಿಪೋರ್ಟನ್ನು ಒಪ್ಪಿಸಿ ಯಾವ ಯಾವ ಶಾಸನಗಳಿಗೆ ಯಾವ ಯಾವ ತಾರೀಖಿನೆಲ್ಲಿ ಶ್ರೀಮನ್ಮಹಾರಾಜರವರ ಒಪ್ಪಿಗೆ ದೊರೆತಿರುವರೆಂಬುದನ್ನು ತಿಳಿಸಿದರು.

ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳಲಾಯಿತು. ಸಭೆಯು ಕಾರ್ಯಕಲಾಪದ ಎಲ್ಲ ಮುಖ್ಯವಿಷಯಗಳನ್ನೂ ಏಮರ್ಶೆಯನ್ನೂ ಮುಂದಿನ ವಾರ ಪ್ರಕಟಿಸಲಾಗುತ್ತೆ.

ಮೈಸೂರು ಯೂನಿವರ್ಸಿಟಿ

ಮೈಸೂರು ಯೂನಿವರ್ಸಿಟಿಯ ಆಕೆಡೆಮಿಕ್ ಕೌನ್ಸಿಲ್ ವಿಾಟಿಂಗು ಈ ತಿಂಗಳು ೨೨ನೇ ತಾರೀಖು ಸೋಮವಾರ ೧೨ ಘಂಟೆಗೆ ಮೈಸೂರು ಯೂನಿವರ್ಸಿಟಿ ಯೂನಿಯನ್ನಿನಲ್ಲಿ ನಡೆಯುವುದು.

ಬೃಂದಾವನದಲ್ಲಿ ದೀಪೋತ್ಸವ

ಬರುವ ಕ್ರಿಸ್‌ಮಸ್ ಕಾಲದಲ್ಲಿ 16 ದಿವಸಗಳು ಅಂದರೆ 20 ನೇ ಡಿಸೆಂಬರ್ 1941 ರಿಂದ 4 ನೇ ಜನವರಿ 1942 ರವರೆಗೆ ಸಂಜೆ ೬ ಗಂಟೆಯಿಂದ ೯ ರವರೆಗೆ ಬೃಂದಾವನದಲ್ಲಿ ದೀಪೋತ್ಸವವು ನಡೆಸಲ್ಪಡುತ್ತಿರುವುದು. (ಪಿ. ಓ

ಜಪಾನ್ ಋಷಿಯ ದಸ್ತಗಿರಿ

ಜಪಾನು ಯುದ್ಧದಲ್ಲಿ ಬಿದ್ದುದರಿಂದ ಮಹಾತ್ಮಾಜಿಯವರ ಸೇವಾ ಗ್ರಾಮ ಆಶ್ರಯದಲ್ಲಿನರೆ. ಜಿ ಕೈಶಾವ ಎಂಬ ಜಪಾನಿನ ಋಷಿಯೊಬ್ಬನನ್ನು ಇಡಲಾಯಿತು. ಗಾಯನ ವಾದ್ಯಗಳನ್ನು ಮಹಾತ್ಮಾಜಿಯವರ ಚರಣ ಸನ್ನಿಧಿಯಲ್ಲಿ ಇಡುವಾಗ್ಯೆ ಅಲ್ಲಿಯ ದೃಶ್ಯವು ಬಹಳ ಹೃದಯವಿದಾರಕವಾಗಿದ್ದಿತೆಂದು ತಿಳಿದು ಬರುತ್ತದೆ.

ಯುದ್ಧದ ಪರಿಸ್ಥಿತಿ

ರಷ್ಯಾ ರಣರಂಗಗಳಲ್ಲಿ ಜರ್ಮನರು ಹಿಂದಕ್ಕೆ ಓಡಿಸಲ್ಪಡುತ್ತಿರುವರು.

ಜಪಾನಿನವರು ಪ್ರಾರಂಭದಲ್ಲಿ ತೋರಿಸಿದ ಆಟ ತಗ್ಗಿದೆ. ಅಮೇರಿಕಾ, ಬ್ರಿಟನ್, ಚೈನಾಗಳ ಕೈ ಜಪಾನಿನ ಮೇಲೆ ಜೋರಾಗಿದೆ.

ವಿವಿಧ ವಿಷಯಗಳು

ಸಂಸ್ಕೃತ ಭಾಷೆಯಲ್ಲಿಯೂ ಫಿಲ್ಮಂಗಳನ್ನು ತಯಾರಿಸಬೇಕೆಂದು ಕೆಲವರು ಅಭಿಪ್ರಾಯ ಪಟ್ಟಿರುವರು.

ಪೂನಾದಲ್ಲಿ ರಾಮಚಂದ್ರ ಕೇಶವನೆಂಬ ಒಬ್ಬ ವಿದ್ಯಾರ್ಥಿಯು ಸಿನಿಮಾಕ್ಕೆ 3 ತಿಂಗಳಿಂದ ಪ್ರತಿದಿವಸವೂ 3 ಸಾರಿಯಂತೆ ತಪ್ಪದೇ ಹೋಗುತ್ತಿದ್ದನಂತೆ. ಈಗ ಅವನಿಗೆ ಹುಚ್ಚು ಹಿಡಿದಿರುವದಂತಿ.

ರಾಜಕೀಯ ಖೈದಿಗಳು ದಿಯೋಲಿ ಬಂಧನ ಶಿಬಿರದಿಂದ ಫತೇಗರ್ ಬಂಧನ ಶಿಬಿರಕ್ಕೆ ಬದಲಾಯಿಸಲ್ಪಟ್ಟಿರುವರು.

ಲಾಹೋರಿನ ಉರ್ದು ಪತ್ರಿಕೆಯೊಂದರ ಸಂಪಾದಕರು 'ಮನೋರಮಾ' ಎಂಬ ನಟಿಯ ಮೇಲೆ ಇಲ್ಲದಸಲ್ಲದ ಅಪಾದನೆಗಳನ್ನು ಒರೆದುದಕ್ಕಾಗಿ ಮ್ಯಾಜಿಸ್ಟ್ರೇಟರು ಸಂಪಾದಕರಿಗೆ 500 ರೂಪಾಯಿ ಜುಲ್ಮಾನೆ ವಿಧಿಸಿರುವುದಾಗಿಯೂ, ಕೊಡದಿತಪ್ಪಿದರೆ ಮೂರು ತಿಂಗಳು ಕಠಿಣ ಸಜಾ ಅನುಭವಿಸಬೇಕೆಂದು ತಿಳಿಸಿರುವುದಾಗಿಯೂ "ಮಿರರ್" ಪತ್ರಿಕೆಯು ತಿಳಿಸುತ್ತದೆ.

ಹೋದವಾರ ಜಮಿನಿ ಸ್ಟೂಡಿಯೋವಿಗೆ ಮದ್ರಾಸ್ ಗೌರ್ನರರು ಭೇಟಿ ಕೊಟ್ಟರೆಂದು ತಿಳಿಯಬಂದಿದೆ.

ಸಿಲೋನಿನಲ್ಲಿ ಇಂಟರ್ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳು ತಮ್ಮ ಉತ್ತರಗಳನ್ನು ನಾಲ್ಕಾರು ಕಾರ್ಬನ್ ಕಾಪಿ ಮಾಡಿಕೊಡಬೇಕೆಂದೂ, ಒರಿಜನಲ್ ಕಾಪಿಗಳನ್ನು ಇಂಗ್ಲೆಂಡಿಗೆ ಕಳುಹಿಸುವದಾಗಿಯೂ ಒಂದು ವೇಳೆ ಶತ್ರುಗಳಿಂದ ಸಂಭವಿಸುವ ಸಪ್ಪದಲ್ಲಿ ಅವುಗಳು ಕೆಳೆದುಹೋದರೆ, ಮಿಕ್ಕ ಕಾಪಿಗಳನ್ನಾದರೂ ಕಳುಹಿಸಬೇಕೆಂದೂ, ತಿಳಿಯಬಂದಿದೆ. ಈ ರೀತಿ ಈಗ ಮೂರು ವರ್ಷಗಳ ಉತ್ತರ ಬರೆದ ಕಾಗದಗಳು ಕಳೆದುಹೋದುದರಿಂದ ಈ ರೀತಿ ಮಾಡಿರುವದಾಗಿ ತಿಳಿಯಬಂದಿದೆ.

ಡೆಲ್ಲಿಯ ಸೆಕ್ರೆಟರಿಯೇಟಿನಲ್ಲಿ ಇದ್ದಕ್ಕಿದ್ದ ಹಾಗೆಯೇ ಪೋಲೀಸಿನವರು ನುಗ್ಗಿ ಸಪ್ಲೈ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರನ್ನು ಅರೆಸ್ಟ್ ಮಾಡಿದರು. ಅತನು ಬಂಗಾಳದ ಕಂಟ್ರಾಕ್ಟರೊಬ್ಬರಿಂದ ಲಂಚವನ್ನು ತೆಗೆದು ಕೊಂಡನೆಂಬುದಾಗಿ ಹೇಳಲಾಗಿದೆ.

ಹೈದರಾಬಾದಿನಲ್ಲಿ ಕಳೆದ ತಿಂಗಳು 22 ರಲ್ಲಿ ಹಗಲಿನಲ್ಲಿಯೇ ಚಂದ್ರನ ಸಮೀಪದಲ್ಲಿ ನಕ್ಷತ್ರಗಳು ಕಾಣಿಸಿದವು. ಜನರು ತಂಡೋಪತಂಡಗಳಾಗಿ ಬಂದು ನೋಡಿದರು.

ಕಳೆದ ತಿಂಗಳು 27 ರಲ್ಲಿ ತಾಡೇಪಲ್ಲಿಗುಂಡಂ ಸಮೀಪದಲ್ಲಿ 12 ಶಿಡಲುಗಳು ಬಿದ್ದು ಜನನಷ್ಟವೂ ಪಶುನಷ್ಟವೂ ಸಂಭವಿಸಿತು.

ಗಾಂಧೀ ಗೀತೆ

ಸತ್ಯಾಗ್ರಹ— ಸತ್ಯದೊಂದಿಗೆ ಅಹಿಂಸಾ ತತ್ವವನ್ನು ಮೇಳಸಮಾಡಿದಲ್ಲಿ ನಿನ್ನ ಸಾಮರ್ಥ್ಯಗಳಲ್ಲಿಗೆ ಪ್ರಸಂಜವನ್ನು ತರಬಹುದು. ಜಾತೀಯ ಜೀವನದಲ್ಲಿಯೂ ರಾಜಕೀಯ ರಂಗದಲ್ಲಿಯೂ ಅಹಿಂಸಾ ಸತ್ಯ ತತ್ವಸಾರವನ್ನು ಪ್ರವೇಶಗೊಳಿಸುವಿಕೆಯೇ ಸತ್ಯಾಗ್ರಹವು.

ದೌರ್ಜನ್ಯರಾಹಿತ್ಯ— ನಾನು ಒಬ್ಬಂಟಿಗನಾಗಿ ನಿಲ್ಲಬೇಕಾಗಿ ಬಂದರೂ ನಾನು ದೌರ್ಜನ್ಯವನ್ನು ನನ್ನ ಜೀವಿತದೊಂದಿಗೆ ಎದುರುಗೊಳ್ಳುವೆನು. ಪ್ರಪಂಚದೊಂದಿಗೆ ಮೈತ್ರಿಯನ್ನು ಏರ್ಪಡಿಸುವಿಕೆಯೇ ನನ್ನ ಜೀವನದ ಗಮ್ಯಸ್ಥಾನವು. ಪ್ರೇಮದೊಂದಿಗೆ ಪ್ರತಿಪಕ್ಷದವನ್ನು ಸಂಧಿಸುವೆನು. ತೀವ್ರವಾದ ಉದ್ರೇಕ ಸಮಯದಲ್ಲಿಯೂ ಶಾಂತವಾದ ಪ್ರೇಮದೊಂದಿಗೆ ವರ್ತಿಸುವಿಕೆಯೇ ನನ್ನ ಪ್ರಥಮ ಪ್ರಧಾನ ಕರ್ತವ್ಯವು ದೌಷ್ಟ್ಯವು ದುಷ್ಟರ ತತ್ವವು. ದೌರ್ಜನ್ಯರಹಿತ ವರ್ತನವು ಮಾನವ ಉತ್ತಮ ಜೀವನಪಥವು ಮಾನವ ಮುಂದಿಂದ ಫಲವು ಉದರಿದರೂ ಉತ್ತಮವಾದ ಏಕಾಗ್ರತೆಯೊಂದಿಗೆ ಗೌರವವಾಗಿ ನಿಂತಿರುವಂತೆ ಶಾಂತಿಪೂಡನೆ ಮಾನವನಿರತಕ್ಕದ್ದು.

ಶಾಸನೋಲಂಘನೆ— ಆತ್ಮಗೌರವದೊಂದಿಗೆ ಕೂಡಿರುವ ಉತ್ತಮ ಶಾಸನಗಳಲ್ಲಿ ಗೌರವವೇ ಶಾಸನೋಲ್ಲಂಘನತತ್ವದ ಪ್ರಧಾನಾಂಶವು.

ಗೋವು— ಹಿಂದೂಮತ ತತ್ವ ಪ್ರಧಾನಾಂಶವು ಗೋ ಸಂರಕ್ಷಣೆ.

ಅಸ್ಪೃಶ್ಯತೆ— ಇದು ಮತನಿಯಮವಲ್ಲ.

[ಗಾಂಧಿಯವರ ಒಂದು ಲೇಖನದಲ್ಲಿಯ ಕೆಲವು ಬಿಡಿಸುಡಿಗಳು.]

The Mysore Silk Filatures, Ltd.

T. NARASIPUR

NOTICE

Notice is hereby given that the **third ordinary General Meeting** of the shareholders of the Mysore Silk Filatures, Ltd., will be held on Monday the 29th December 1941 at 3 p.m. at the Registered Office of the Company at T. Narasipur.

The Share transfer books of the Company will be closed from 17-12-41 to 31-12-1941 both days inclusive.

By Order of the Board

For the Mysore Silk Filatures, Ltd.

For Messrs. Binny & Co.

T. Narasipur,

19-12-1941

ಈ ವಾರದ ಭವಿಷ್ಯ

ಮೇಷ

ಅನಾನುಕೂಲಗಳು ಸ್ವಲ್ಪ ಕಡಮೆಯಾಗವುವು. ಕೆಲಸಕಾರ್ಯಗಳು ಕೈಗೂಡುವುವು. ಹೇಗೋ ಒಂದು ಬಗೆಯಿಂದ ಹಣದ ತೊಂದರೆ ತಗ್ಗುವುದು.

ವೃಷಭ

ಹಣದ ಅಡಚಣೆಯಿದೆ. ಉದ್ಯೋಗ ನೌಕರಿಯಲ್ಲಿ ಉತ್ಸಾಹ ಮತ್ತು ಯಶಸ್ಸು. ಸ್ವಪರಜನರ ಸಹಾಯ ಸಹಾನುಭೂತಿ

ಮಿಥುನ

ಬೇಕಾದಷ್ಟು ಕುಷಿ ಪಡಿ. ಏನೂ ಅನಾನುಕೂಲಗಳಿಲ್ಲ. ಧನಾಗಮನ ಚೆನ್ನಾಗಿದೆ. ಯತ್ನಕಾರ್ಯ ಸಿದ್ಧಿಸುವುದು.

ಕರ್ಕಾಟಕ

ಆರ್ಥಿಕ ಬಿಕ್ಕಟ್ಟು ಸಡಲಿಸುವುದು. ಬಂಧುಮಿತ್ರರ ಸಹಾಯವಿದೆ. ಹಿಡಿದ ಕೆಲಸಗಳಲ್ಲಿ ಜಯವಿದೆ.

ಸಿಂಹ

ಚಿಂತೆಯಿಂದ ಆವರಿಸಿರುವಿರಿ. ಪನಿಸಿಗೆ ಏನೂ ಸರಿಯಾಗಿ ತೋಚುವದಿಲ್ಲ ನೌಕರಿ ಉದ್ಯೋಗದಲ್ಲಿ ಅನಾನುಕೂಲವಿಲ್ಲ. ಹಣಕಾಸಿನ ಬಿಕ್ಕಟ್ಟು, ಜನರಿಂದ ಮನಸೋಯುವಂಥ ಮಾತನ್ನು ಕೇಳುವುದೂ ಸಧ್ಯಕ್ಕೆ ಒದಗಿದೆ.

ಕನ್ಯಾ

ಶುಂಬಾ ಅನಾನುಕೂಲದಲ್ಲಿರುವಿರಿ ಸ್ವಪರಜನರ ಸಹಾಯ ಒದಗುವುದು. ಜನರಲ್ಲಿ ನಿಷ್ಕೂರ ಮಾಡಿಕೊಳ್ಳಬೇಡಿ.

ತುಲಾ

ನಿಮ್ಮ ಸ್ಥಿತಿಗತಿಗಳು ಉತ್ತಮಗೊಳ್ಳುವುವು. ಪ್ರಯತ್ನಿಸಿದ ಕಾರ್ಯಗಳು ತಕ್ಕಮಟ್ಟಿಗೆ ಕೈಗೂಡುವುವು. ಸ್ವಲ್ಪ ಧುಡ್ಡಿನ ಅನುಕೂಲ ದೊರೆಯುವಂತಿದೆ.

ವೃಶ್ಚಿಕ

ಎಲ್ಲಾ ವಿಧಗಳಲ್ಲಿಯೂ ಅನುಕೂಲ ಸ್ವಲ್ಪ ಜಾಗ್ರತೆಯಿಂದ ವರ್ತಿಸಿರಿ. ಎಲ್ಲರ ಮಾತಿಗೂ ಸಮ್ಮತಿ ಕಿವಿಗೊಡಬೇಡಿ. ಹಣದ ಅನುಕೂಲವೂ, ನೌಕರಿ ಉದ್ಯೋಗದಲ್ಲಿ ಜಯವೂ ಇದೆ.

ಧನು

ಖಾಯಿಲೆಗೆ ತುತ್ತಾದೀರಿ ಜಾಗರೂಕರಾಗಿರಿ. ಹಣದ ತೊಂದರೆ, ಬಂಧು ಜನರಿಂದ ತ್ರಾಸ, ಸಂಸಾರದಲ್ಲಿ ಅಸುಖ.

ಮಕರ

ಸಂಸಾರದಲ್ಲಿ ಸುಖ, ಜನಧನ ಸಹಾಯದಲ್ಲಿ ಅನುಕೂಲ. ಬಯಸಿದ ಕಾರ್ಯ ಕೈಗೂಡುವದು.

ಕುಂಭ

ಅನುಕೂಲಗಳೇ ಒದಗುವುವು. ಹಣದ ಅಡಚಣೆ ದೂರವಾಗುವುದು. ಶತ್ರುಗಳು ಮಿತ್ರರಾಗುವರು. ಯತ್ನ ಕಾರ್ಯ ಸಿದ್ಧಿಸುವದು.

ರಾಜಮುಡಿ ಮತ್ತು ಶ್ರೀಕಂಠಮುಡಿಗಳು

——

ಮೈಸೂರು ಶಾಸನ ಇಲಾಖೆಯವರು ಈ ಮುಡಿಗಳ ವಿಷಯವಾಗಿ ಸ್ವಾರಸ್ಯದ ಅಂಶಗಳನ್ನು ಹೊರಗೆಡಹಿದ್ದಾರೆ.—

ರಾಜಮುಡಿಯೆಂಬುದು ಬಹಳ ಅಮೂಲ್ಯ ರತ್ನಾಭರಣವಸ್ತು. ಅದನ್ನು ಮೈಸೂರು ಅರಮನೆಯಲ್ಲಿ ಭದ್ರಪ್ಪೆತವಾಗಿ ಕಾಪಾಡಲಾಗಿದೆ. ಮೇಲುಕೋಟೆಯಲ್ಲಿ ನಡೆಯುವ ವಿಶೇಷ ಉತ್ಸವಗಳಲ್ಲಿ ಶ್ರೀ ಚಲುವರಾಯ ಸ್ವಾಮಿಯವರ ಉಪಯೋಗಕ್ಕೆ ಅದನ್ನು ಕಳುಹಿಸಲಾಗುತ್ತೆ. ಈ ಮುಡಿಗೆ ಸೇರಿದಹಾಗೆ ರತ್ನದ ಪದ್ಮಪೀಠವಿದೆ ಇದರ ಹಿಂಭಾಗದಲ್ಲಿ ಒಂದು ಕನ್ನಡ ಶಾಸನವಿದೆ. ಈ ಶಾಸನದಿಂದ ಮೈಸೂರಿನ ರಾಜರಾದ ರಾಜಒಡೆಯರು 1536 (ಶಕಾಬ್ದ) ನೇ ಆನಂದ ಸಂವತ್ಸರದ ಆಷಾಢ ಪಂಚಮಿ ಶುಕ್ರವಾರ ಮಾಡಿಸಿಕೊಟ್ಟಿದೆಂದು ಗೊತ್ತಾಗುತ್ತೆ. ಆಭರಣದ ತೂಕ 42 ತೊಲ.

ಈ ಅಮೂಲ್ಯ ಆಭರಣವನ್ನು ಮೇಲುಕೋಟೆ ಶ್ರೀ ಚಲುವರಾಯಸ್ವಾಮಿಯವರಿಗೆ ಸಮರ್ಪಿಸಿದ್ದರಿಂದ ಮೈಸೂರು ಅರಸರು ಎಷ್ಟರ ಮಟ್ಟಿಗೆ ಶ್ರೀವೈಷ್ಣವ ಮತದಲ್ಲೂ ಗೌರವ ತೋರಿಸುವರೆಂಬುದು ಗೊತ್ತಾಗುತ್ತದೆ.

ಕೃಷ್ಣರಾಜ ಮುಡಿಯನ್ನು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು ಶ್ರೀ ಚಲುವರಾಯಸ್ವಾಮಿ ದೇವರಿಗೆ ಮಾಡಿಸಿಕೊಟ್ಟರೆಂದು ಆದರಲ್ಲಿರುವ ಶಾಸನದಿಂದ ತಿಳಿಯಬರುತ್ತೆ.

ಅದೇ ಮೇಲುಕೋಟೆ ದೇವರ ರತ್ನದ ನಡುಪಟ್ಟಿ ಹಿಂಭಾಗದಲ್ಲೂ ಒಂದು ಚಿಕ್ಕ ಶಾಸನವಿದೆ. ಅದರಿಂದ ಬಸವಲಿಂಗಯ್ಯ ಎಂಬುವರು ಈ 70 ಫಟ್ಟ ವರಾಹ ಬೆಲೆಯಾಗುವ ಈ ನಡುಪಟ್ಟಿಯನ್ನು ಮಾಡಿಸಿಕೊಟ್ಟರೆಂದು ತಿಳಿದು ಬರುತ್ತದೆ.

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವರ ರತ್ನ ಕಿರೀಟ ಶ್ರೀಕಂಠಮುಡಿಯಲ್ಲಿ ಒಂದು ಶಾಸನವಿದೆ. ಮೈಸೂರು ಅರಸರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಪುತ್ರಿಯರಾದ ಕೆಂಪಜಾಮಣ್ಣಿಯವರು ಶಕಾಬ್ದ 1742 ನೇ ಪ್ರಮಾಧಿ ಚೈತ್ರ ಶುದ್ಧ ಪಾಡ್ಯ ಶುಕ್ರವಾರ ದೇವರಿಗೆ ಮಾಡಿಸಿಕೊಟ್ಟರೆಂದು ತಿಳಿದುಬರುತ್ತೆ.

ಮೀನ

ಅನುಕೂಲಗಳೇನೂ ಅಷ್ಟು ಹೆಚ್ಚಾಗಿಲ್ಲವಾದರೂ ಅಂತಹ ಕೆಡಕಿಲ್ಲ. ಬಂಧುಮಿತ್ರರ ಸಹಾಯವಿದೆ. ಕೆಲಸ ಕಾರ್ಯಗಳು ತಕ್ಕ ಮಟ್ಟಿಗೆ ಚೆನ್ನಾಗಿ ನಡೆಯುವವು

ಮಿತಿಮೀರಿದ ಧಾರಣೆಗಳು

——

ಕಳೆದ ಎರಡು ವರ್ಷಗಳ ಕೆಳಗೆ ಯುದ್ಧ ಪ್ರಾರಂಭವಾದಾಗಿನಿಂದ ಪದಾರ್ಥಗಳ ಆದರಲ್ಲೂ ಆಹಾರ ಮತ್ತು ಜೀವನಾಧಾರ ವಸ್ತುಗಳ ಬೆಲೆಗಳು ಏರಿವೆ. ಆದರೆ ಒಂದು ವಾರದಿಂದೀಚೆಗೆ ಅಂದರೆ ಜಪಾನಿನವರು ಬ್ರಿಟಿಷ್ ಪರ, ಅಮೇರಿಕಾ ದೇಶಗಳ ಮೇಲೆ ಯುದ್ಧವನ್ನು ಪ್ರಾರಂಭಿಸಿದಲಾಗಾಯ್ತು ಧಾರಣೆವಾಸಿಗಳು ಮಿತಿಮೀರಿ ಏರಿವೆ. ಯುದ್ಧವು ನಮ್ಮ ಭಾರತವನ್ನು ಸಮೀಪಿಸುತ್ತಿರುವ ವಿಷಮ ಪರಿಸ್ಥಿತಿಯಲ್ಲಿ ಕೆಲವರು ಈ ಸನ್ನಿವೇಶವನ್ನು ಶಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳಲು ಪ್ರಾರಂಭಿಸಿದ್ದಾರೆ. ಇವರ ನಡವಳಿಕೆಯಿಂದ ದೇಶದಲ್ಲಿ ಕಳವಳವೂ ಅಲ್ಲಕಲ್ಲೋಲವೂ ಉಂಟಾಗಿದೆ. ಮಧುರಾದಲ್ಲಿ ನಡೆಯುತ್ತಿತ್ತಿರುವ ಗಲಭೆಗಳೇ ಇದಕ್ಕೆ ಸಾಕ್ಷೀಭೂತವಾಗಿವೆ. ಈ ದುಷ್ಪರಿಣಾಮಗಳನ್ನು ಯೋಚಿಸದೆ ಕೆಲವರು ಮಿತಿಮೀರಿದ ಲಾಭಾರ್ಜನೆಯನ್ನು ಮಾಡುತ್ತಲೂ ಮತ್ತೆ ಕೆಲವರು ಪದಾರ್ಥಗಳನ್ನು ಹೇರಳವಾಗಿ ಶೇಖರಿಸಿಡಲೂ ಮೊದಲು ಮಾಡಿದ್ದಾರೆ. ಇದನ್ನು ಕೂಡಲೆ ಹತೋಟಿಯಲ್ಲಿಡುವುದು ಅತ್ಯಾವಶ್ಯಕವೂ ಧರ್ಮವೂ ಆಗಿರುತ್ತೆ. ಇದಕ್ಕೆ ಸರ್ಕಾರದವರೂ, ವಾಣಿಜ್ಯ ಸಂಸ್ಥೆಗಳೂ, ಸ್ಥಳೀಯ ಸಂಸ್ಥೆಗಳೂ, ಸಾರ್ವಜನಿಕರೂ ಕೂಡಲೇ ನಿಗಾ ಕೊಡಬೇಕಾಗಿದೆ. ಈ ವಿಷಯ ಕೇವಲ ನಮ್ಮ ಮೈಸೂರು ದೇಶಕ್ಕೇ ಸಂಬಂಧಪಟ್ಟಿದಲ್ಲದೆ ಅಖಿಲಭಾರತಕ್ಕೂ ಸಂಬಂಧಪಟ್ಟಿದ್ದು. ಕಷ್ಟವಾದಾಗ್ಯೂ ಅಸಾಧ್ಯವೇನೂ ಅಲ್ಲ. ಸರಿಯಾದ ಮಾರ್ಗಗಳನ್ನೂ ವಿಧಾನಗಳನ್ನೂ ಕಂಡುಹಿಡಿದು ಪರಿಸ್ಥಿತಿಯನ್ನು ಹತೋಟಿಗೆ ತರದಿದ್ದಲ್ಲಿ ಪರಿಸ್ಥಿತಿಯು ಹದಗೆಟ್ಟು ಎಪರೀತವಾದ ದುಷ್ಪರಿಣಾಮವಾಗುವುದರಲ್ಲಿ ಸಂದೇಹವೇನೂ ಇಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಕೂಡಲೆ ವ್ಯಾಪಾರ ಸಂಸ್ಥೆಗಳ ಮತ್ತು ಸಾರ್ವಜನಿಕರ ಸಲಹೆಗಳನ್ನೂ ಸಹಕಾರವನ್ನೂ ಪಡೆದು ಭಾರತದ ಪ್ರಾಂತೀಯ ಮತ್ತು ಕೇಂದ್ರ ಸರಕಾರಗಳೊಂದಿಗೆ ಸಮಾಲೋಚನೆಯನ್ನು ನಡೆಸಿ ತುರ್ತಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವೂ ಮತ್ತು ಅವರ ಕರ್ತವ್ಯವೂ ಆಗಿರುತ್ತದೆ. ಈ ಉದ್ಯಮದಲ್ಲಿ ವರ್ತಕರೆಲ್ಲರೂ ದೇಶಾಭಿಮಾನಪ್ರೇರಿತರಾಗಿ ವ್ಯಾಪಾರವು ಕೇವಲ ದ್ರವ್ಯಾರ್ಜನೆ ಮಾಡುವ ಒಂದು ಉದ್ಯೋಗವೆಂದು ಪರಿಗಣಿಸದೆ ಅದು ಒಂದು ವಿಧವಾದ ಪವಿತ್ರ ಕಾರ್ಯವೆಂಬ ಭಾವನೆಯಿಂದ ಸರ್ಕಾರದವರೊಡನೆಯೂ ಸಾರ್ವಜನಿಕ ಮುಖಂಡರ ಜೊತೆಯಲ್ಲೂ ಸಹಕರಿಸಿ ಜನತೆಯ ಆದರಕ್ಕೂ ಮೆಚ್ಚಿಕೆಗೂ ಪಾತ್ರರಾಗಲೆಂದು ಹಾರೈಸುತ್ತೇವೆ.

(ನೈಶ್ಯ ಪತ್ರಿಕೆ)

ಪತ್ತೇದಾರಿ ಕಾದಂಬರಿ—ಲೇಖಕರು—ಗುಂಡ್ಮಿ ಸದಾಶಿವಭಟ್ಟ

"ಅದ್ಭುತ ಸಾಹಸ"

(ಈ ಗ್ರಂಥದ ಸಕಲ ಹಕ್ಕುಗಳು ಸತ್ಯವಾದಿ ಆಫೀಸಿಗೆ ಸೇರಿದೆ)

(ಕಳೆದ 3 12 41ನೇ ಸಂಚಿಕೆಯಿಂದ ಮುಂದುವರಿದುದು)

ವಿನ್ಸಿಯು ಅವನ ಮಾತಿಗೆ ಉತ್ತರವಾಗಿ ಇಲ್ಲ ಇಲ್ಲ ನನಗೆ ನಿಮ್ಮ ಮತ್ತು ಆತನ ಭೇಟಿಯಲಿ ಯಾವ ಪಥದ ಅಡ್ಡಿಯೂ ಇಲ್ಲ. ನಾನು ಈಗಲೇ ಹೋಗಿ ಡೇವೋಪಗೆ ವರ್ತಮಾನ ಕೊಡ ತ್ತೇನೆ ಎಂದು ಹೇಳಿದನು.

ಬ್ಲೇಕ್—ಒಳ್ಳೇದು. ಧನ್ಯವಾದಗಳಿ. ನನಗಷ್ಟು ತ್ವರೆಯೂ ಇಲ್ಲ; ಅಲ್ಲದೆ ಆತನೊಡನೆ ಅಗತ್ಯದ ಮಾತನಾಡುವ ವಿಚಾರವೂ ಇಲ್ಲ. ಇರಲಿ ಸ್ವಲ್ಪ ಒಂದು ಬಟ್ಟಲು ಶರಾಬನ್ನು ಕುಡಿದು ಹೋಗಿರಿ.

ಮನಸ್ಸಿಲ್ಲದಿದ್ದರೂ ಕಾರ್ಡೋನನು ನಸುನಕ್ಕು ಆತನ ಪಕ್ಕದ ಕುರ್ಚಿಯೊಂದರಲ್ಲಿ ಕುಳಿತುಕೊಂಡನು. ಕಾರ್ಡೋನನು ಹೆಚ್ಚು ಸಮಯದ ವರೆಗೆ ತನ್ನ ಹತ್ತಿರ ಕುಳಿತುಕೊಳ್ಳುವುದಿಲ್ಲವೆಂಬುದು ಮಿ|| ಬ್ಲೇಕನಿಗೆ ಗೊತ್ತಿದ್ದಿತು. ಅಲ್ಲದೆ ಈ ಸಮಯದಲ್ಲಿ ಡೇವಿಡನು ಆ ಸ್ಥಳಕ್ಕೆ ಬಂದರೆ ತನ್ನ ಸುಸಿದ್ಧವಾದ ಕೆಲಸವೆಲ್ಲವೂ ಒಂದೇ ಸರ್ತಿಗೆ ಕೆಟ್ಟುಹೋಗುವುದೆಂಬುದನ್ನು ಬ್ಲೇಕನು ತಿಳಿದಿದ್ದನು. ಒಂದು ವೇಳೆ ಹಾಗಾಯಿದಾದರೆ, ಅತನಿಗೆ ತಾನು ಏಸ್ಕೂಲನ್ನು ತೆಗೆದುಕೊಂಡು ಬರಲಿಲ್ಲವಲ್ಲಾ ಎಂದು ಬಹು ದುಃಖವೂ ಆಗಬಹುದಾಗಿದ್ದಿತು.

ಆದರೆ ಮಿ|| ಬ್ಲೇಕನು ಡೇವೋವಾಕ್ಕೆ ಒಪ್ಪಿಕೊಂಡಿದ್ದ ಕೆಲಸವು, ಪೂರ್ಣ ಧೈರ್ಯವನ್ನು ವಹಿಸದೆ ಯಾವ ರೀತಿಯೂ ಕೈಗೂಡಲಾರದೆಂದು ಅರಿತಿದ್ದನು. ಇಷ್ಟು ದೊಡ್ಡ ವ್ಯತ್ಯಯವು ತನ್ನ ತಲೆಯ ಮೇಲೆ ಸುತ್ತುತ್ತಿದ್ದ ಸಮಯದಲ್ಲಿಯೂ ಅವನು ಸುಮ್ಮನೆ ಗಂಭೀರನಾಗಿಯೂ, ಶಾಂತನಾಗಿಯೂ ಮುಗುಳ್ನಗೆ ನಗುತ್ತಾ ತನ್ನ ಸ್ಥಳದಲ್ಲಿ ಕುಳಿತಿದ್ದನು.

ವಿನ್ಸಿಯು ಒಹು ಬೇಗನೆ ಶರಾಬಿನ ಒಟ್ಟಲನ್ನು ಬರಿಗೆಯ್ದನು. ಆ ಮೇಲೆ ತನ್ನ ಸ್ಥಾನದಿಂದೆದ್ದು ನಿಂತು ಸಮ್ಮತಿಯನ್ನು ಸೂಚಿಸುತ್ತಾ, ಒಳ್ಳೇದು ನಾನು ಈಗ ಹೋಗಿ ಡೋವೋವಿಗೆ ನಿಮ್ಮ ಸಮಾಚಾರವನ್ನು ಅರಹುವೆನು ಎಂದು ಹೇಳಿ ಹೊರಟನು.

ಆದರೆ ಈ ಮಾತನಾಡುವಾಗ ಅವನು ತುಂಬಾ ಧ್ಯಾನದಿಂದ ಮಿ|| ಬ್ಲೇಕನ ಮುಖವನ್ನು ದಿಟ್ಟಿಸುತ್ತಿದ್ದನು. ಬ್ಲೇಕನು ಆ ಕಡೆಗೆ ಸ್ವಲ್ಪವೂ ಲಕ್ಷ್ಯಕೊಡದೆ "ಆಗಲಿ, ಧನ್ಯವಾದ' ಎಂದು ತುಂಬಾ ಸರಳತನದಿಂದ ಹೇಳಿ, ಶರಾಬಿನ ಬಟ್ಟಲನ್ನೆತ್ತಿ ಕುಡಿಯಹತ್ತಿದನು. ಸಂಗಡವೇ ಕಡೆಗಣ್ಣಿನಿಂದ ಕಾರ್ಡೋನನು ಬಾಗಿಲೊಳಗೆ ಪ್ರವೇಶಿಸಿ ಮಾಯವಾದುದನ್ನು ನೋಡುತ್ತಿದ್ದನು.

ಬ್ಲೇಕನು ಹೆಚ್ಚು ಹೊತ್ತು ಕಾದು ಕುಳಿತಿರಬೇಕಾಗಲಿಲ್ಲ. ಬಾಗಿಲು ಪುನಃ ತೆರೆಯಿತು. ಮಿ|| ಬ್ಲೇಕನಿಗೆ ಯಾರೋ ತನ್ನ ಕಡೆಗೆ ಧ್ಯಾನದಿಂದ ನೋಡುತ್ತಿದ್ದಾರೆಂಬಂತೆ ಕಂಡಿತು. ಒಂದೇ ನೋಟದಲ್ಲಿ ಇವನು ಡೇವೋ ಮಜಿ ಎಂದು ಮಿ|| ಬ್ಲೇಕನು ಅರಿತುಬಿಟ್ಟನು.

ಈ ಮನುಷ್ಯನು ಕಾರ್ಡೋನನಿಗಿಂತಲೂ ಭಯಂಕರನೆಂದು ಮಿ|| ಬ್ಲೇಕನಿಗೆ ತಿಳಿಯದಿರಲಿಲ್ಲ. ಕಾರ್ಡೋನನ ಹತ್ತಿರ ತಾನು ಡೊವೋ ಮಜಿಗೆ ಪರಿಚಿತನೆಂದು ಪ್ರಕಟಿಸಿದಾಗ್ಯೂ, ನಿಜವಾಗಿ ಈ ಮುಂಚೆ ಎಂದೂ ಬ್ಲೇಕನಿಗೆ ಅವನೊಡನೆ ಭೇಟಿಯಾಗಿರಲಿಲ್ಲ. ಅವನು ಕೇವಲ ಒಂದು ಸಾರಿ ಮಾತ್ರ ಮಜಿಯನ್ನು ನ್ಯೂಯಾರ್ಕಿನಲ್ಲಿ ಕಂಡಿದ್ದನು. ಅದೇ ಪ್ರಕಾರ ವಿನ್ಸೀ ಕಾರ್ಡೋನನನ್ನು ತನ್ನ ನ್ಯೂಯಾರ್ಕಿನ ಮಿತ್ರನಾದ ಬ್ಯಾಯಂಟ್ಸ್ ಕೆಸೇಡಿಯ ಜೊತೆಗಿದ್ದಾಗ ಅಲ್ಲಿಯೇ ನ್ಯೂಯಾರ್ಕಿನಲ್ಲಿ ನೋಡಿದ್ದನು.

ತಾನು ದೊಡ್ಡ ಅಪಾಯಕರವಾದ ಕಾರ್ಯವನ್ನು ಮಾಡುತ್ತಿದ್ದೇನೆಂದೂ ಬ್ಲೇಕನು ಅರಿತಿದ್ದನು. ಯಾಕೆಂದರೆ ಆತನ ಹೆಸರನ್ನು ಕೇಳಿದ ಕೂಡಲೆ ಡೇವೋ ಮಜಿಯು ಕಾರ್ಡೋನನ ಹತ್ತಿರ ತನಗೆ ಆತನ ಪರಿಚಯವೇ ಇಲ್ಲವೆಂದು ಸ್ಪಷ್ಟವಾಗಿ ನಿರಾಕರಿಸಬಹುದಾಗಿದ್ದಿತು. ಆದುದರಿಂದಲೇ ಮಿ|| ಬ್ಲೇಕನು ಡೇವೋವಿನ ದಳದವರು ಮಜಿಯನ್ನು ಆ ಸ್ಥಳದಲ್ಲಿ ನೋಡಲು ನನ್ನನ್ನು ಪ್ರಾರ್ಥಿಸಿರುವರು" ಎಂದು ಕಾರ್ಡೋನನ ಹತ್ತಿರ ಪ್ರಕಟಗೊಳಿಸಿದನು. ಈ ಮಾತನ್ನು ಕೇಳಿದ ಒಳಿಕ ಮಜಿಯು ಆತನು ಯಾವ ಇಚ್ಛೆಯಿಂದ ಈ ಸ್ಥಳಕ್ಕೆ ಬಂದಿರುವದನ್ನು ತಿಳಿಯದೆ, ಕಾರ್ಡೋನನಿಗೆ ತನ್ನ ಸಂದೇಹವನ್ನು ಪ್ರಕಟಪಡಿಸಲಾರನೆಂದು ಬ್ಲೇಕನಿಗೆ ಸಂಪೂರ್ಣ ಆಶೆ ಇದ್ದಿತು.

ಆದರೆ ಸ್ಕಾಲಿಯು ಹೇಳಿದ ಅನುಮಾನವು ನಿಜವಾಗಿದ್ದರೆ ಮಾತ್ರ ಡೋವೋ ಮಜಿಯು ಸುಮ್ಮನಿರಬಹುದಾಗಿದ್ದಿತು. ಅಂದರೆ ಕಾರ್ಡೋನನ ಸಂಪತ್ತೆಲ್ಲವೂ ಎಲ್ಲಿ ಇಡಲ್ಪಟ್ಟಿದೆ ಎಂಬುದನ್ನು ಪತ್ತೆ ಹಚ್ಚಿದ ಮೇಲೆ, ವಾಸ್ತವಿಕವಾಗಿ ಅವನನ್ನು ಕೊಲ್ಲುವುದಕ್ಕಾಗಿಯೇ ಮಜಿಯು ಜೆನೋವಾಕ್ಕೆ ಬಂದಿರುವನೆಂಬ ವಾರ್ತೆಯು ಸತ್ಯವಾದರೆ ಡೇವೋ ಮಜಿಯು ಸುಮ್ಮನಿರಬಹುದು. ಒಂದು ವೇಳೆ ಸ್ಕಾಲಿಯು ಅನುಮಾನವು ದಿಟವಲ್ಲದೆ ಹೋದರೆ, ಈಗ ಸಿದ್ಧಪಡಿಸಿದ ಕಾರ್ಯವೆಲ್ಲವೂ ಮಣ್ಣುಗೂಡುವುದೆಂಬುದು ನಿಶ್ಚಯ. ಏನೇ ಆಗಲಿ. ಬ್ಲೇಕನು ಗಂಭೀರವಾದ ಧ್ವನಿಯಲ್ಲಿ "ಬಾ, ಬಾ, ಮಿಸ್ಟರ್ ಮಜೀ! ನಾವಿತ್ತಿರುವುದೇಕೆ?" ಎಂದು ದೂರದಿಂದಲೇ ಕರೆದು ಹೇಳಿದನು.

ತನ್ನ ಹಿಂದಿನ ಬಾಗಿಲನ್ನು ಹಾಕುತ್ತಾ ಮಜಿಯು ಮೆಲ್ಲಡಿಗೆಯಿರಿದು ಮಿ|| ಬ್ಲೇಕನ ಬಳಿಗೆ ಬಂದನು. ಇನ್ನೂ ಒಂದು ಗಜ ದೂರದಲ್ಲಿರುವಾಗಲೇ ಅವನು ಪ್ರಶ್ನೆ ಹಾಕಿದನು—"ಹೇಳಿರಿ ಮಹಾಶಯ! ನೀವು ಯಾವ ಅಭಿಲಾಷೆಯಿಂದ ಇಲ್ಲಿಯ ವರೆಗೆ ಬಂದು ನನ್ನನ್ನು ನೋಡುವ ಕಷ್ಟ ವಹಿಸಿದಿರಿ? ನನಗೆ ನಿಮ್ಮ ಗುರುತೂ ಇಲ್ಲ. ಅಲ್ಲದೆ ....."

ಆತನಿಗೆ ಮುಂದೆ ಮಾತಾಡಲು ಅವಕಾಶಕೊಡದೆ ಮಿ|| ಬ್ಲೇಕನು ಮೆಲ್ಲನಿಯಲ್ಲಿ "ಸುಮ್ಮನಿರು, ಮೂರ್ಖ! ಸ್ವಲ್ಪ ವಿವೇಕದಿಂದ ಕೆಲಸಮಾಡು" ಎಂದು ಬೆದರಿಸಿ ಹೇಳಿದನು.

ಈ ಮಾತನ್ನು ಮಿ|| ಬ್ಲೇಕನು ಒಂದು ವಿಲಕ್ಷಣರೀತಿಯ ಮುಖಭಂಗಿಯಿಂದ ತುಂಬಾ ಗಂಭೀರಭಾವದಿಂದ ಹೇಳಿದ್ದನು. ಆದರೆ ಆದೇ ಸ್ವಲ್ಪ ಹೊತ್ತಿನ ಬಳಿಕ ಮುಗುಳ್ನಗೆ ನಗುತ್ತಾ "ಡೋವೋ! ಕೊನೆಗೆ ಸಂಗತಿಯೇನು? ನ್ಯೂಯಾರ್ಕಿನ ಗೆಳೆಯರ ಕಡೆಯಿಂದ ನೀನು ಇತ್ತೀಚೆಗೆ ಇಷ್ಟೇಕೆ ಉದಾಸೀನನಾಗಿರುವೆ? ಬಹಳ ದಿನಗಳಿಂದ ಅವರಿಗೆ ನಿನ್ನ ಸಮಾಚಾರವೇನೂ ಸಿಕ್ಕಲಿಲ್ಲ. ಅವರು ನಿನ್ನನ್ನು ನೋಡಿ ವರ್ತಮಾನ ತಿಳಿಸಲು ನನಗೆ ತುಂಬಾ ಆಗ್ರಹದಿಂದ ಹೇಳಿದ್ದರು. ಬಾ, ಕುಳಿತುಕೋ. ಸ್ವಲ್ಪ ಶರಾಬಿನ ಆನಂದವನ್ನು ಪಡೆ" ಎಂದು ಗಟ್ಟಯಾಗಿ ಹೇಳಿದನು.

ಸೋಜಿಗದಿಂದ ಮಿ|| ಬ್ಲೇಕನ ಮುಖವನ್ನು ದಿಟ್ಟಿಸಿ ನೋಡುತ್ತಾ, ಡೋವೋ ಮಜಿಯು ಆತನ ಒಳಿಗೆ ಬಂದು ಒಂದು ಕುರ್ಚಿಯ ಮೇಲೆ ಕುಳಿತನು. ಆ ಮೇಲೆ ಮಂದಸ್ವರದಲ್ಲಿ "ನಿಜವಾಗಿ ಹೇಳು, ಕೊನೆಗೆ ಸಂಗತಿ ಏನು?" ಎಂದು ಕೇಳಿದನು.

ಮಿ|| ಬ್ಲೇಕನು ಆತನ ಮಾತಿಗೆ ಕಿವಿಗೊಡದೆ ಸ್ವಲ್ಪ ಉಚ್ಚಧ್ವನಿಯಲ್ಲಿ "ಇದಿಗೋ, ಮೊದಲು ಶರಾಬು ಕುಡಿ" ಎಂದು ಹೇಳಿ ಗಟ್ಟಯಾಗಿ ಹೊರಟಿರುವನನ್ನು ಕೂಗಿ, ಪುನಃ ಆಜ್ಞಾಪಿಸಿದನು.

[ನಾಳಿನ ಸಂಚಿಕೆಯಲ್ಲಿ ಮುಂದುವರಿಯುವುದು

Sri
Mahalakshmi Hall
Tailors
Outfitters
&
Breeches Specialists
Sayyaji Rao Road, Mysore

ಅಕ್ಕರ ಸಾಮಾಜಿಕ
— ಭಾವಪರಿಪೂರ್ಣವಾದ ಕಥೆ !
ಓದಲು ಪ್ರಾರಂಭಿಸಿದರೆ ಕಥೆಪೂರ್ತಿಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ.
ಬೆಲೆ 6 ಆಣೆ, ಪೋಸ್ಟೇಜು 1 ಆಣೆ. 7 ಆಣೆ ಸ್ಟ್ಯಾಂಪು ಕಳುಹಿಸಿದರೆ ಪುಸ್ತಕವನ್ನು ಕಳುಹಿಸುತ್ತೇವೆ.
ಸತ್ಯವಾದಿ ಆಫೀಸ್. ಮೈಸೂರು

Discerning Comeptitors
alway consult
The Oracle
Weekly (Regd)
for expert comments and exhaustive
Forum, on I. W. C.
— Published Every Wednesday —
Subscription Rates
Annual Rs 4, Half-yearly Rs 2
Quarterly Re 1
Price per copy 2 annas
THE ORACLE
68 Commercial Street, Bangalore

The Indian Marriage Gazette
The only illustrated monthly journal of its kind in India containing very interesting and instructive articles on matrimonial topics.
Every home should have a copy of this unique journal as it will help to solve the problem of marriage both now and in future.
Annual subscription Rs. 3
Single copy As. 5 in stamps.
Wanted Agents in every town.
Apply to— The Manager
The Indian Marriage Gazette
Post Box No. 227, Madras

The Satyavadi Limited
(Incorporated in Mysore State)
A few shares of Rs. 5 are available

ಉಪಯುಕ್ತವಾದ ವರ್ತಮಾನ
ಮನೆ, ಗದ್ದೆ, ವಗೈರೆ ಮಾರತಕ್ಕವರೂ, ಕೊಳ್ಳತಕ್ಕವರೂ, ಭೋಗ್ಯ, ಆಧಾರ ಮಾಡತಕ್ಕವರೂ, ಭೋಗ್ಯ ಆಧಾರಕ್ಕೆ ಏರ್ಪಾಯತಕ್ಕವರೂ, ಮತ್ತು ಮನೆಗಳನ್ನು ಬಾಡಿಗೆಗೆ ಕೊಡತಕ್ಕವರೂ, ಬಾಡಿಗೆಗೆ ತೆಗೆದುಕೊಳ್ಳುವವರೂ ಸಾಲ ಕೊಡತಕ್ಕವರೂ, ಸಾಲ ತೆಗೆದುಕೊಳ್ಳುವವರೂ, ನಮ್ಮ ಪಜೀನ್ಸಿಗೆ ತಿಳಿಸಿದಲ್ಲಿ ಸೂಕ್ತವಾದ ಏರ್ಪಾಡು ಮಾಡಲಾಗುವದು
ಮ್ಯಾನೇಜರ್. ಸತ್ಯವಾದಿ ಆಫೀಸ್
ಚಾಮರಾಜಪುರಂ, ಮೈಸೂರು.

Satya Stores
Jagan Mohan Palace Road
MYSORE
For Sweets, Students' requisites
Soaps, hair oils, Biscuits



ಪುರುಷರ ಬಲ ಯೌವನಗಳಿಗಾಗಿಯೂ, ಸ್ತ್ರೀಯರ ಸಂತಾನ ಸೌಂದರ್ಯಗಳಿಗಾಗಿಯೂ
ಅನಾದಿಯಿಂದಲೂ ಪ್ರಯತ್ನಿಸುತ್ತಿರುವುದುಂಟು. — — ಈ ಕೋರಿಕೆಗಳು ಸಫಲಿಸಲು ಇಂದೇ ನಮ್ಮ

ಅಮೃತ ಸುಧಾ

— ಉಪಯೋಗಿಸಿರಿ —

ಧಾತು ಕ್ಷೀಣತೆ, ಧಾತು ಸೀರತಗುವಿಕೆ, ಉಷ್ಣವ್ಯಾಧಿಗಳಿಂದ ನರಳುವಿಕೆ, ಕೈಕಾಲುತೆಳೆತ, ಸ್ವಪ್ನಸ್ಖಲನ, ಸಂಭೋಗೇಚ್ಛೆ ಇಲ್ಲದಿರುವಿಕೆ, ಸಂಭೋಗ ಕಾರ್ಯದಲ್ಲಿ ನಿರ್ಬಲತೆಇಂದ್ರಿಯ ಸಂಬಂಧ ದೋಷಗಳು ಮೇಹಹಾಗೂ ಉಷ್ಣ ಸಂಬಂಧ ವ್ಯಾಧಿಗಳನ್ನು ಖಚಿತರಿಯಾಗಿ ಗುಣಮಾಡುವ ಅಮೃತ ಸದೃಶವಾದ ಸಂಜೀವಿನಿಯು ಇದು ದಿನಕ್ಕೆ ಎರಡುಬಾರಿ, ಸುಖೋಷ್ಣವಾದ ಹಾಲಿನೊಂದಿಗೆ ಸೇವಿಸತಕ್ಕದ್ದು. ಹೆಚ್ಚು ಪಥ್ಯವೇನೂ ಇಲ್ಲ. ಉಪ್ಪು, ಹುಳಿ ಕಾರಗಳನ್ನು ಮಿತಿಯಾಗಿ ಉಪಯೋಗಿಸುವದು ಒಳ್ಳೇದು ಮುದುಕರೂ, ಶಕ್ತಾಣವಿಲ್ಲದವರೂ, ಹೆಚ್ಚು ಮೆದಳಿನ ಕೆಲಸಮಾಡುವರೂ, ಈ ಔಷಧಿಯನ್ನು ಸೇವಿಸುವಕಾಲದಲ್ಲಿ ವಾರಕ್ಕೆ ಎರಡುಬಾರಿ ಅಭ್ಯಂಗನ ಸ್ನಾನವನ್ನು ಮಾಡುತ್ತಾ ಒಂದಲ್ಲಿ ಹೆಚ್ಚುಗುಣವು ಕಾಣಬರುವುದು. ಬೆಲೆ 1 ರೂಪಾಯಿ

ಶ್ರೀ ಧನ್ವಂತರಿ ವೈದ್ಯಶಾಲಾ — ಡಿಸ್ಟ್ರಿಬ್ಯೂಟರು — ಕಂಪ್‌ರಾಂಜಿ ಅಂಡ್ ಕಂಪೆನಿ
ಅಶೋಕ್ ರೋಡ್, ಒಡಾರ್, ಮೈಸೂರು 157 ಕಬ್ಬನ್‌ಪೇಟೆ ಫೋನ್ ರೋಡ್ ಬೆಂಗಳೂರು ಸಿಟಿ.